ಇ) ಕಡಲು ಕೊರೆತದಂಥ ತುರ್ತು ಸ್ಥಿತಿಯಲ್ಲಿ ವೆಚ್ಚ ಮಾಡಲು ತುರ್ತು ನಿಧಿಯನ್ನು ರಚಿಸಲು ಸರ್ಕಾರ ಉದ್ದೇಶಿಸಿದೆಯೇ ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಬಂದಿದೆ

ಆ) ದಕ್ಷಿಣ ಕನ್ನಡಜಿಲ್ಲೆಯಸುರತ್ಕಲ್‌ಪ್ರದೇಶದಲ್ಲಿ ಸಮುದ್ರ ಕೊರೆತವನ್ನು ತಡೆಗಟ್ಟಲು ನಿರ್ದೇಶಕರು, ಕೆ.ಇ.ಆರ್.ಆಸ್.ಕೆ.ಆರ್.ಸಾಗರ ಇವರು ನೀಡಿರುವ ಮಾದರಿವಿನ್ಯಾಸದ ಪ್ರಕಾರ ತಡೆಗೋಡೆ ನಿರ್ಮಾಣಮಾಡಲಾಗುತ್ತಿದೆ. ಸುರತ್ಕಲ್‌ಕ್ಷೇತ್ರಕ್ಕೆಸಂಬಂಧಿಸಿದಂತೆ, ಪ್ರಾರಂಭದಿಂದ2: 99ರ ವರೆಗೆ, 5, 719 ಕಿ. ಮಿ ಉದ್ದದ ತಡೆಗೋಡೆಯನ್ನು 376. 718 ಲಕ್ಷ ರೂ. ಗಳವೆಚ್ಚದಲ್ಲಿ ನಿರ್ಮಿಸಲಾಗಿದೆ. 4 ಕಾಮಗಾರಿಗಳು ಪ್ರಗತಿಯಲ್ಲಿದೆ.

ಇ) ಸಲಹೆಯನ್ನು ಪರಿಶೀಲಿಸಲಾಗುವುದು.

ಮಂಗಳೂರು ಕಾರಗೃಹದಲ್ಲಿ ಸಿಬ್ಬಂದಿ ಕೊರತೆ.

287 (179) ಶ್ರೀ ಕುಂಬ್ಳೆ ಸುಂದರರಾವ್ (ಸುರತ್‌ಕಲ್) : ಮಾನ್ಯ ಕಾರಾಗೃಹ, ಗೃಹ ರಕ್ಷಕದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಕಾರಾಗೃಹ ಸ್ಥಳಾಭಾವ ಸಮಸ್ಯೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಈ ಸಮಸ್ಯೆಯನ್ನು ನಿವಾರಿಸಲುಸರ್ಕಾರವು ತೆಗೆದುಕೊಳ್ಳಲಿರುವ ಗಳು ಯಾವುವು;

ಇ) ಕಾರಾಗೃಹದಲ್ಲಿ ಈಗ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ಸಂಖ್ಯೆ ಎಷ್ಟು ಹಾಗೂ ಸಿಬ್ಬಂದಿಯ ಕೊರತೆಯಿರುವುದು ಸರ್ಕಾರದ ಗಮನಕ್ಕೆಬಂದಿದೆಯೇ; (ಹುದ್ದೆವಾರು ಮಾಹಿತಿ ಒದಗಿಸುವುದು)

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ತೆಗದುಕೊಂಡ ಕ್ರಮಗಳು ಯಾವುವು?

ಶ್ರೀ ಬಸವರಾಜ್ ನೀಲಪ್ಪ ಶಿವಣ್ಣನವರ್ (ಕಾರಾಗೃಹ, ಗೃಹರಕ್ಷಕದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು) :

ಅ) ಹೌದು.

ಆ) ಮಂಗಳೂರಿನಲ್ಲಿರುವ ಪ್ರಸುತ್ತ ಜೈಲಿನಲ್ಲಿಯೇ ಅಗತ್ಯ ಮಾರ್ಪಾಟುಗಳೊಂದಿಗೆ 300 ಬಂದಿಗಳಿಗಾಗುವಷ್ಟು ಹೆಚ್ಚುವರಿ ಬ್ಯಾರಕ್ಕುಗಳನ್ನು ನಿರ್ಮಿಸಿಕೊಳ್ಳಬಹುದು ಹಾಗೂ ಭದ್ರತಾ ವ್ಯವಸ್ಥೆಗೆ ಬೇಕಾದ ಅನುಕೂಲಗಳನ್ನೂ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಅದಕ್ಕಾಗಿ ಲೋಕೋಪಯೋಗಿ ಇಲಾಖೆಯಿಂದ ಅಂದಾಜನ್ನು ತಯಾರಿಸಲಾಗುತ್ತಿದೆ.

ಇ) ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ವಿವಿಧ ವೃಂದದ ಒಟ್ಟು 34 ಮಂಜೂರಾದ ಹುದ್ದೆಗಳಿದ್ದು, ಈ ಪೈಕಿ 23 ಹುದ್ದೆಗಳು ಭರ್ತಿಯಿದ್ದು, 11ಹುದ್ದೆಗಳು ಖಾಲಿ ಇರುತ್ತವೆ. ವಿವರಣಾ ಪಟ್ಟಿ ಅನುಬಂಧ 'ಅ' ದಲ್ಲಿ ಲಗತ್ತಿಸಿದೆ. ಈಗಿನ ಖೈದಿಗಳ ಸಂಖ್ಯೆಗೆ ಹೋಲಿಸಿದಲ್ಲಿ ಸಿಬ್ಬಂದಿಯ ಕೊರತೆ ಇರುತ್ತದೆ.

ಈ) 1) ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

2) ಕಾರಾಗೃಹಗಳಲ್ಲಿ ಸಿಬ್ಬಂದಿ ಹೆಚ್ಚಿಸುವ ವಿಚಾರವು ಸರ್ಕಾರ ಪರಿಶೀಲನೆಯಲ್ಲಿದೆ.

ಅನುಬಂಧ 'ಅ'

ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಕುಂಬ್ಳೆ ಸುಂದರರಾವ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 179ಕ್ಕೆ ಸಂಬಂಧಿಸಿದಂತಹ ಮಂಗಳೂರು ಜಿಲ್ಲಾ ಕಾರಾಗೃಹ ವೃಂದ ಬಲ :-

ಹುದ್ದೆ	ಮಂಜೂರಾದ ಹುದ್ದೆ ಸಂಖ್ಯೆ	ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ	ಖಾಲಿ ಹುದ್ದೆ
1) ಸಹಾಯಕ ಅಧೀಕ್ಷಕರು	1	1	-
2) ಜೈಲರ್	2	1	1
3) ಚೀಫ್ ವಾರ್ಡರ್	1	1	-
4) ಹೆಡ್ ವಾರ್ಡರ್	3	3	-
5) ವಾರ್ಡರ್	18	13	5
6) ಪ್ರ.ದ.ಸಹಾಯಕರು	1	1	-
7) ದ್ವಿ.ದ.ಸಹಾಯಕರು	1	1	-
8) ಬೆರಳಚ್ಚುಗಾಯರು	1	-	1
9) ವಾರ್ಡರ್ (ನರ್ಸಿಂಗ್)	1	-	1
10) ವೈದ್ಯಾಧಿಕಾರಿ	1	-	1
11) ಫಾರ್ಮಾಸಿಸ್ಟ್	1	-	1
12) ಉಪಾಧ್ಯಾಯರು	1	-	1
13) ಸ್ವೀಪರ್	1	1	-
14) ಪಂಪ್ ಆಟೆಂಡರ್	1	1	-
	34	23	11

ಮಂಗಳೂರು ಜಿಲ್ಲಾ ಕಾರಾಗೃಹಕ್ಕೆ ಕೆಳಕಂಡ ಹೆಚ್ಚುವರಿ ಹುದ್ದೆಗಳನ್ನು ಕೋರಲಾಗಿದೆ.

ಚೀಫ್ ವಾರ್ಡರ್	3 ಹುದ್ದೆ
ಹೆಡ್ ವಾರ್ಡರ್	11 ಹುದ್ದೆ
ವಾರ್ಡರ್	37 ಹುದ್ದೆ
ಒಟ್ಟು	51 ಹುದ್ದೆ

ಸುರತ್ಕಲ್ ಠಾಣೆಯನ್ನು ಮೇಲ್ದರ್ಜೆಗೆ ಏರಿಸುವುದು

288 (180) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚು ವ್ಯಾಪ್ತಿಯನ್ನು ಹೊಂದಿರುವ ಪೋಲೀಸ್ ಠಾಣೆ ಯಾವುದು ;

ಆ) ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಹೊಸ ಠಾಣೆಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಇ) ಹಾಗಿದ್ದಲ್ಲಿ ಸ್ಥಾಪನೆಗೊಳ್ಳಲಿರುವ ಹೊಸ ಠಾಣೆಗಳ ಸಂಖ್ಯೆ ಎಷ್ಟು ಹಾಗೂ ಎಲ್ಲೆಲ್ಲಿ ಸ್ಥಾಪಿಸಲಾಗುವುದು ಮತ್ತು ಎಂದಿನಿಂದ ಸ್ಥಾಪಿಸಲಾಗುವುದು ;

ಈ) ಸುರತ್ಕಲ್ ಠಾಣೆಯನ್ನು ಮೇಲ್ದರ್ಜೆಗೇರಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಉ) ಹಾಗಿದ್ದಲ್ಲಿ ಸದರಿ ಠಾಣೆಯನ್ನು ಎಂದಿನಿಂದ ಮೇಲ್ದರ್ಜೆಗೇರಿಸಲಾಗುವುದು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಗೃಹ ಸಚಿವರು) :

ಅ) ಸುರತ್ಕಲ್ ವಿಧಾನಸಭೆ ಕ್ಷೇತ್ರದಲ್ಲಿ ಮಂಗಳೂರು ಪೋಲೀಸ್ ಠಾಣೆ ಹೆಚ್ಚು ವ್ಯಾಪ್ತಿಯನ್ನು ಹೊಂದಿರುತ್ತದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಈ) ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಸರ್ಕಾರದ ಪರಿಶೀಲನೆಯಲ್ಲಿದೆ.